‘ಉದ್ಯೋಗಕ್ಕಾಗಿಯೇ ಓದು’ ಎಂಬುದರಷ್ಟೇ ಮುಖ್ಯವಾಗಿ ‘ಜ್ಞಾನಕ್ಕಾಗಿ ಓದು’ ಎಂದು ಹಾತೊರೆಯುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಪೂರಕ ಸಂಪನ್ಮೂಲ ಸಾಮಗ್ರಿಗಳನ್ನು ತಯಾರಿಸಿ ಒದಗಿಸುವುದು ಜರೂರಾದುದು. ಕನ್ನಡದಲ್ಲಿ ವಿಷಯಾಧಾರಿತ ಪದಕೋಶವನ್ನು ಸಿದ್ಧಗೊಳಿಸುವುದರ ಜೊತೆಗೆ ಅನುವಾದಿತ ಸಾಮಗ್ರಿಯು ವಿದ್ಯಾರ್ಥಿಗಳ ತಿಳುವಳಿಕೆಗೆ ನಿಲುಕುವಂತೆ ಇರಬೇಕಾದುದು ಅಗತ್ಯವಾಗಿದೆ.

ಹೀಗೊಂದು ವಿಶಿಷ್ಟ ಭಾಷಾಂತರ ಯೋಜನೆ

ಹಿನ್ನೆಲೆ

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ನಿರ್ದಿಷ್ಟ ಸಾಮಾಜಿಕ ಕಳಕಳಿಯನ್ನು ಹೊಂದಿದ್ದು ಶಿಕ್ಷಣದ ಮೂಲಕ ನ್ಯಾಯಯುತ, ಸಮಾನ, ಮಾನವೀಯ ಮತ್ತು ಸುಸ್ಥಿರ ಸಮಾಜದ ನಿರ್ಮಾಣದ ಉದ್ದೇಶದಿಂದ ಸ್ಥಾಪಿತವಾಗಿದೆ. ಈಗಾಗಲೇ ಶಿಕ್ಷಣ ಮತ್ತು ಅಭಿವೃದ್ಧಿ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಅಲ್ಲದೆ ಮಾನವಿಕ ಶಾಸ್ತ್ರ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಲ್ಲಿ ಪದವಿ ಹಂತದ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇದುವರೆಗಿನ ಅನುಭವಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಕನ್ನಡ ಮಾಧ್ಯಮದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ತನ್ನ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ. ವೈವಿಧ್ಯಮಯ ಸಾಮಾಜಿಕ ಹಿನ್ನೆಲೆಗಳನ್ನು ಹೊಂದಿರುವ ಕರ್ನಾಟಕದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಿ ಅವರು ಗುಣಾತ್ಮಕ ಉನ್ನತ ಶಿಕ್ಷಣ ಪಡೆಯುವಂತೆ ಮಾಡುವುದು ವಿಶ್ವವಿದ್ಯಾಲಯದ ಆದ್ಯತೆಗಳಲ್ಲಿ ಒಂದು. ಈ ಉದ್ದೇಶದ ಮೊದಲ ಹೆಜ್ಜೆಯಾಗಿ, ಮುಂಬರುವ ವರ್ಷಗಳಲ್ಲಿ ಎರಡು ವರ್ಷಗಳ ಎಮ್‌ಎ (ಶಿಕ್ಷಣ) ಕಾರ್ಯಕ್ರಮ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಮುಂದೆ ಇತರ ಪದವಿ ಮತ್ತು ಸ್ನಾತಕೋತ್ತರ ಪದವಿ

ಕಾರ್ಯಕ್ರಮಗಳನ್ನೂ ಇತರ ಅಲ್ಪಾವಧಿ ಕೋರ್ಸ್‌ಗಳನ್ನೂ ಕನ್ನಡ ಮಾಧ್ಯಮದಲ್ಲಿ ನಡೆಸುವ ಆಲೋಚನೆಯಿದೆ.

ಭಾಷಾಂತರ ಪ್ರಯತ್ನದ ಉದ್ದೇಶ

ಪ್ರಸ್ತುತ ಪದವಿ ಮತ್ತು ಸ್ನಾತಕೋತ್ತರ ಪದವಿ ಹಂತಗಳಲ್ಲಿ ಬೋಧಿಸುವ ಪ್ರಾಧ್ಯಾಪಕರಿಗೆ (ಅವರು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಕನ್ನಡದಲ್ಲೇ ಬೋಧಿಸುತ್ತಿದ್ದರೂ) ಕನ್ನಡದಲ್ಲಿ ಗುಣಮಟ್ಟದ ಪಠ್ಯ ಮತ್ತು ಆಕರ ಗ್ರಂಥಗಳ ಲಭ್ಯತೆಯ ಕೊರತೆಯಿದೆ. ಈ ವಾಸ್ತವವು ಕನ್ನಡವಲ್ಲದೆ ಭಾರತದ ಇತರ ದೇಶೀಯ ಭಾಷೆಗಳಿಗೂ ಅನ್ವಯವಾಗುತ್ತದೆ. ಹೀಗಾಗಿಯೇ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಹಂತದಲ್ಲಿ ಇಂಗ್ಲಿಷ್ ಮಾಧ್ಯಮವನ್ನೇ ಆಯ್ಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆಯಿದೆ. ಇಂತಹ ವಿದ್ಯಾರ್ಥಿಗಳು ಗೈಡ್‌ಗಳನ್ನೋ ಅಥವಾ ಗುಣಾತ್ಮಕವಲ್ಲದ ಭಾಷಾಂತರ ಸಂಪನ್ಮೂಲಗಳನ್ನೋ ಬಳಸಿ ಪರೀಕ್ಷೆಗೆ ಸಿದ್ಧರಾಗಬೇಕಾದ ಪರಿಸ್ಥಿತಿಯಿದೆ. ಈ ಶೈಕ್ಷಣಿಕ ಕೊರತೆಯನ್ನು ನೀಗಿಸುವುದು ಪ್ರಸ್ತುತ ಭಾಷಾಂತರ ಕೆಲಸದ ಹಿಂದಿನ ಮುಖ್ಯ ಉದ್ದೇಶ.

ಇದು ಎಲ್ಲ ವಿಶ್ವವಿದ್ಯಾಲಯಗಳ ಬೋಧಕ ವರ್ಗ ಮತ್ತು ಆಸಕ್ತ ವಿದ್ಯಾರ್ಥಿಗಳಿಗೂ ಸಿಗಬೇಕೆಂಬುದು ಇನ್ನೊಂದು ಉದ್ದೇಶ.

ಮುಂಬರುವ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಗುಂಪಿನಲ್ಲಿ ಪ್ರಸ್ತುತ ವೃತ್ತಿನಿರತರಾಗಿರುವ ಅನುಭವಿ ಶಿಕ್ಷಕರು, ಶಿಕ್ಷಣ ಕ್ಷೇತ್ರದಲ್ಲಿ ವಿವಿಧ ಹುದ್ದೆಗಳಲ್ಲಿರುವ ಅಧಿಕಾರಿಗಳು, ಸ್ವಯಂಸೇವಾ ಸಂಸ್ಥೆಗಳ ಕಾರ್ಯಕರ್ತರು ಉನ್ನತ ಮಟ್ಟದ ವ್ಯಾಸಂಗಕ್ಕಾಗಿ ಆಸಕ್ತಿ ತೋರಿದಲ್ಲಿ ಅವರಿಗೆ ಅನುಕೂಲವಾಗುವಂತೆ ಸ್ನಾತಕೋತ್ತರ ಪದವಿ ಕೋರ್ಸ್‌ನ್ನು ಪುನರ್‌ರೂಪಿಸುವ ಆಲೋಚನೆಯಿದೆ. ಈ ಅನುಭವಿ ಗುಂಪು, ತಮ್ಮ ಜ್ಞಾನದ ಹರಹನ್ನೂ, ದೃಷ್ಟಿಕೋನವನ್ನೂ ವಿಸ್ತೃತಗೊಳಿಸಿಕೊಳ್ಳುವ ಮೂಲಕ ತಮ್ಮ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಲ್ಲದೆ ತಮ್ಮ ತರಗತಿಗಳಲ್ಲಿ ಇನ್ನೂ ಹೆಚ್ಚಿನ ಆಳವಾದ ಜ್ಞಾನವನ್ನು, ಮಾರ್ಗದರ್ಶನವನ್ನು ವಿದ್ಯಾರ್ಥಿಗಳಿಗೆ ನೀಡುವ ಆತ್ಮವಿಶ್ವಾಸವನ್ನು ಗಳಿಸಿಕೊಂಡು, ಎಲ್ಲ ಸ್ತರದ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವ ಸಾಧ್ಯತೆ ಹೆಚ್ಚುತ್ತದೆ.

ಭಾಷಾಂತರದ ವಿಶಿಷ್ಟತೆ

ಈ ಶೈಕ್ಷಣಿಕ ಭಾಷಾಂತರ ಕಾರ್ಯವು ಒಂದು ಬಗೆಯಲ್ಲಿ ವಿಶಿಷ್ಟವಾಗಿದೆ. ಈ ಸಂವಾದವನ್ನು ಗಮನಿಸೋಣ:

"ಪಿಯಾಜೆರವರ– *sensory motor stage, pre-operational stage, concrete operational stage* – ಇವುಗಳಿಗೆ ಕನ್ನಡದಲ್ಲಿ ಯಾವ ಸಮಾನಾಂತರ ಪದಗಳನ್ನು

ಬಳಸಬಹುದು?" "ನಿಮ್ಹಾನ್ಸ್ ನ ಡಾ. ಉಮಾ ಬರೆದಿರುವ ಪುಸ್ತಕದಲ್ಲಿ *sensory motor stage* ಗೆ ಇಂದ್ರಿಯ ಆಂಗಿಕ ಹಂತವೆಂದು ಬಳಸಲಾಗಿದೆ".

"ಸಾಮಾಜಿಕ ಸಾಂಸ್ಕೃತಿಕ ಕಲಿಕೆಗೆ ಬೇಕಾದ ಪ್ರಮುಖ ಸಂಜ್ಞಾನ ಸಾಮರ್ಥ್ಯ ಎಂದರೆ ವ್ಯಕ್ತಿಗಳ ನಡುವಿನ ಅಂತರ್-ವೈಯಕ್ತಿಕತೆ ಇದು *the most basic cognitive ability needed for socio-cultural learning is inter-subjectivity*ಗೆ ನಾನು ಮಾಡಿರುವ ಭಾಷಾಂತರ. ಬೇರೆ ಪರ್ಯಾಯವಿದ್ದರೆ ತಿಳಿಸಿ."

"ಈ ಇಂಗ್ಲಿಷ್ ವಾಕ್ಯ ಅಥವಾ ನುಡಿಗಟ್ಟುಗಳಿಗೆ, *`To construct jigsaw puzzle of a Totem pole', 'therapeutic consultation', 'zone of proximal development' 'guided participation'* ಹತ್ತಿರದ ಸೂಕ್ತ ಕನ್ನಡದ ವಾಕ್ಯ ಅಥವಾ ನುಡಿಗಟ್ಟುಗಳಾವುವು?".

ಈ ಮೇಲಿನ ಸಂವಾದವು ಕಾಲೇಜಿನ ತರಗತಿಕೋಣೆಯಲ್ಲಿ ನಡೆದದ್ದಲ್ಲ. ಬದಲಾಗಿ ಈ ಭಾಷಾಂತರ ಕಾರ್ಯದ ಅಂಗವಾಗಿ ಶೈಕ್ಷಣಿಕ ಮನಃಶಾಸ್ತ್ರದ ಆಯ್ದ ಲೇಖನಗಳನ್ನು ಭಾಷಾಂತರಿಸಲು ಹೊರಟಿರುವ ಬೆಂಗಳೂರು ವಿಶ್ವವಿದ್ಯಾಲಯದ ಮನಃಶಾಸ್ತ್ರ ವಿಭಾಗದ ಅನುಭವಿ ಪ್ರಾಧ್ಯಾಪಕರು, ಮುಖ್ಯಸ್ಥರು, ಮನೋವೈಜ್ಞಾನಿಕ ವೃತ್ತಿಪರರು ಸಂಶೋಧನಾ ವಿದ್ಯಾರ್ಥಿಗಳ ನಡುವೆ ಅವರೇ ರಚಿಸಿಕೊಂಡಿರುವ ವಾಟ್ಸ್‌ಆ್ಯಪ್ ಗುಂಪಿನಲ್ಲಿ ನಡೆದಿರುವ ಆಸಕ್ತಿದಾಯಕ ಚರ್ಚೆ. ಈ ಗುಂಪು ಅನೇಕ ಪರಸ್ಪರ ನೇರ ಕಾರ್ಯಾಗಾರಗಳಲ್ಲೂ ಭಾಗವಹಿಸಿದೆ. ಈ ಪ್ರಕ್ರಿಯೆಯಲ್ಲಿ, ಎಂಟು ಜನರ ಈ ತಂಡವು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಅದಾಗಲೇ ಇಪ್ಪತ್ತು ಲೇಖನಗಳನ್ನು ಭಾಷಾಂತರಗೊಳಿಸಿದೆ.

ಈ ತಂಡದ ಅದಮ್ಯ ಉತ್ಸಾಹದ ಹಿಂದೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಆದಷ್ಟೂ ಸುಲಭವಾದ, ಗುಣಮಟ್ಟದ ಸಂಪನ್ಮೂಲವನ್ನು ಒದಗಿಸುವ ಹಂಬಲವಿದೆ. ಸಾಧ್ಯವಿದ್ದಲ್ಲಿ ತಮ್ಮ ತರಗತಿಗಳಲ್ಲೂ ಈ ಲೇಖನಗಳನ್ನು ಬಳಸಿಕೊಳ್ಳುವ ಆಸಕ್ತಿ ಅವರಿಗಿದೆ. ಈ ಪ್ರಕ್ರಿಯೆಯ ಮೂಲಕ ಕನ್ನಡದಲ್ಲಿ ಹೊಸ ಪದಕೋಶವೇ ಸಿದ್ಧಗೊಳ್ಳುತ್ತಿದೆ. ಇವೆಲ್ಲವೂ ಪ್ರಜಾಪ್ರಭುತ್ವದ ತತ್ವವನ್ನು ಅಳವಡಿಸಿಕೊಂಡು ಸಮಾಲೋಚನಾ ವಿಧಾನದಲ್ಲಿಯೇ ನಡೆದಿರುವುದು ಮತ್ತು ಈ ಕೆಲಸದಲ್ಲಿ ತೊಡಗಿರುವವರು ಎಷ್ಟೇ ತಜ್ಞರಾಗಿದ್ದರೂ ತಾವು ಮಾಡುವ ಕೆಲಸವು ವಿದ್ಯಾರ್ಥಿಗಳ ತಿಳುವಳಿಕೆಗೆ ನಿಲುಕುವಂತಿರಬೇಕು ಎಂಬ ಮೂಲ ಆಶಯಕ್ಕೆ ಬದ್ಧರಾಗಿದ್ದುಕೊಂಡು ಮುನ್ನಡೆದಿರುವುದು ಗಮನಾರ್ಹ. ಕನಿಷ್ಠವೆಂದರೂ ಮೂರು ಹಂತಗಳ ಪರಿಶೀಲನೆಗೆ ಒಳಪಟ್ಟು ನಂತರ ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಅಧ್ಯಯನ-ಚರ್ಚೆಗೆ ಬಳಸಲು ಕೊಡಲಾಗುತ್ತದೆ. ಅವರಿಗೆ ಸುಲಭವಾಗಿ ಅರ್ಥವಾದರೆ ಮಾತ್ರ ಈ ಭಾಷಾಂತರ ಕ್ರಿಯೆಯ ಒಂದು

ಆವರ್ತವು ಪೂರ್ಣಗೊಂಡಂತಾಗುತ್ತದೆ. ಮೇಲಿನ ಲೇಖನಗಳಲ್ಲಿ ಬಳಸಿರುವ ಅನೇಕ ಉದಾಹರಣೆಗಳು ಪಾಶ್ಚಿಮಾತ್ಯ ದೇಶಗಳ ಹಿನ್ನೆಲೆಯದ್ದಾಗಿವೆ. ಎಲ್ಲೆಲ್ಲಿ ಅವಶ್ಯಕವೋ ಅಲ್ಲಲ್ಲಿ ಮೂಲ ಪರಿಕಲ್ಪನೆಗಳಿಗೆ ಧಕ್ಕೆಯಾಗದಂತೆ ಈ ನೆಲದ ವಾಸ್ತವಕ್ಕೆ ಸೂಕ್ತವಾಗುವ ಸನ್ನಿವೇಶಗಳನ್ನು ಬಳಸುವ ಸ್ವಾತಂತ್ರ್ಯವು ಈ ತಂಡಕ್ಕಿದೆ. ಮೂಲ ಲೇಖನದ ಇಡೀ ಸಾರವನ್ನು ಅರ್ಥೈಸಿಕೊಂಡು ಅದಕ್ಕೆ ಹತ್ತಿರವಾದ ಭಾವವನ್ನು ಸರಳ ಮಾತಿನಲ್ಲಿ ಹಿಡಿದಿಡಬೇಕಾಗುತ್ತದೆ. ಹೀಗಾಗಿ ಇದೊಂದು 'ಪುನರ್ನಿರ್ಮಾಣ'ದ ಕಾರ್ಯವೇ ಆಗಿದ್ದು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ್ದಾಗಿದೆ.

ವಿಸ್ತೃತ ಸಹಯೋಗದ ಯೋಜನೆ

ಶೈಕ್ಷಣಿಕ ಮನಃಶಾಸ್ತ್ರದ ಗುಂಪಿನಂತೆಯೇ ರಾಜ್ಯದ ವಿವಿಧ ವಿಶ್ವವಿದ್ಯಾಲಯ ಗಳಲ್ಲಿನ ವಿಷಯ ತಜ್ಞರನ್ನೊಳಗೊಂಡ ಇಪ್ಪತ್ತಕ್ಕೂ ಹೆಚ್ಚಿನ ಗುಂಪುಗಳು ಈ ಭಾಷಾಂತರ ಕ್ರಿಯೆಯಲ್ಲಿ ತೊಡಗಿಸಿಕೊಂಡಿವೆ. ತಮ್ಮ ವಿಷಯಗಳಲ್ಲಿ ಇವರೆಲ್ಲರೂ ಉನ್ನತ ಮಟ್ಟದ ಪರಿಣಿತಿ ಹೊಂದಿರುವುದರ ಜೊತೆಗೆ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಸಾಕಷ್ಟು ಹಿಡಿತ ಹೊಂದಿದವರಾಗಿದ್ದಾರೆ. ಆಸಕ್ತಿದಾಯಕ ವಿಷಯವೆಂದರೆ ಇವರಾರೂ ಸಾಂಪ್ರದಾಯಿಕ ಅರ್ಥದಲ್ಲಿ ಭಾಷಾಂತರಕಾರರಲ್ಲ. ಆದರೂ ಪುನರ್‌ಸೃಷ್ಟಿ ಕ್ರಿಯೆಯಲ್ಲಿ ಸ್ವಇಚ್ಛೆಯಿಂದ ಭಾಗವಹಿಸುತ್ತಿರುವುದು ಭವಿಷ್ಯದಲ್ಲಿ ವಿದ್ಯಾರ್ಥಿಗಳ ಹೆಚ್ಚಿನ ಓದಿಗೆ ಬುನಾದಿಯಾಗಲಿದೆ. ಯಾವೊಂದು ವಿಶ್ವವಿದ್ಯಾಲಯವೂ ತನ್ನಷ್ಟಕ್ಕೇ ಇಂಥ ಬೃಹತ್ ಕಾರ್ಯವನ್ನು ಕೈಗೆತ್ತಿಕೊಂಡು ಸಾಧಿಸಲಾಗದು. ಇತರ ಶೈಕ್ಷಣಿಕ ತಜ್ಞರ ಸಹಯೋಗದಿಂದಲೇ ಇದನ್ನು ಸಾಧ್ಯವಾಗಿಸಬೇಕಾಗುತ್ತದೆ.

ವಾಸ್ತವ ನೆಲೆಯ ಪ್ರಶ್ನೆಗಳು

ಇಡೀ ಉನ್ನತ ಶಿಕ್ಷಣವು ಇಂಗ್ಲಿಷ್ ಮಾಧ್ಯಮದಲ್ಲಿ ನಡೆದಿರುವಾಗ ಎಷ್ಟು ವಿದ್ಯಾರ್ಥಿಗಳು, ಸೇವಾನಿರತ ಶಿಕ್ಷಕರು, ಶಿಕ್ಷಣಾಸಕ್ತರು ಈ ಕೋರ್ಸ್‌ಗೆ ನೊಂದಾಯಿಸಿಕೊಂಡಾರು? ಕೋರ್ಸ್ ಮುಗಿಸಿದವರಿಗೆ ಇದರಿಂದ ಭವಿಷ್ಯದಲ್ಲಿ ಏನು ಲಾಭ? ಇನ್ನೂ ಹೆಚ್ಚಿನ ಅಧ್ಯಯನವನ್ನು ಮತ್ತು ಸಂಶೋಧನೆಯನ್ನು ಕನ್ನಡದಲ್ಲಿಯೇ ಮುಂದುವರೆಸಬಲ್ಲರೆ? ಮುಂತಾದ ಪ್ರಶ್ನೆಗಳು ಸ್ವಾಭಾವಿಕವಾಗಿ ಎದುರಾಗುತ್ತವೆ ಮತ್ತು ಜಿಜ್ಞಾಸೆಗೆ ಹಚ್ಚುತ್ತವೆ.

ಒಂದಂತೂ ಸತ್ಯ. ಕನ್ನಡ ಅಥವಾ ಇತರ ದೇಶೀಯ ಭಾಷೆಗಳ ಮಾಧ್ಯಮದಲ್ಲಿಯೇ ಪದವಿ ಅಥವಾ ಪಿಯುಸಿ ಹಂತವನ್ನು ಮುಗಿಸಿದವರಿಗೆ, ಅದರಲ್ಲೂ ಗ್ರಾಮೀಣ ಭಾಗಗಳ ವಿದ್ಯಾರ್ಥಿಗಳಿಗೆ ಉನ್ನತ ತರಗತಿಗಳಲ್ಲಿ ಇಂಗ್ಲಿಷಿನ ಕಠಿಣ ಗ್ರಂಥಗಳನ್ನು, ಸಂಪನ್ಮೂಲಗಳನ್ನು ಬಳಸಲಾಗುವುದಿಲ್ಲ. ಆ

ಮಟ್ಟಿಗೆ ಈ ಪ್ರಯತ್ನದ ಮೂಲಕ ಹೊರಬರುವ ಭಾಷಾಂತರಗೊಂಡ ಪುಸ್ತಕಗಳು, ಲೇಖನಗಳು ಅವರಿಗೆ ನೆರವಾಗಬಲ್ಲವು. ಮೇಲಾಗಿ 'ಉದ್ಯೋಗಕ್ಕಾಗಿಯೇ ಓದು' ಎಂಬುದರಷ್ಟೇ ಮುಖ್ಯವಾಗಿ 'ಜ್ಞಾನಕ್ಕಾಗಿ ಓದು' ಎಂದು ಹಾತೊರೆಯುವ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಅನುಕೂಲಕರವಾದ ಪೂರಕ ಸಂಪನ್ಮೂಲ ಸಾಮಗ್ರಿಗಳನ್ನು ತಯಾರಿಸಿ ಒದಗಿಸುವುದು ಜರೂರಾದುದು.

ಇದರೊಂದಿಗೆ, ಉನ್ನತ ಮಟ್ಟದ ಜ್ಞಾನ ಸಂಪಾದನೆಗಾಗಿ ಇಂಗ್ಲಿಷಿನ ಹಿಡಿತ ಬೇಕೇಬೇಕಾಗುತ್ತದೆ. ಶ್ರೇಷ್ಠ ಮಟ್ಟದ ಇಂಗ್ಲಿಷ್ ಪುಸ್ತಕಗಳು, ಲೇಖನಗಳು, ಪ್ರಕಟಣೆಗಳನ್ನು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ದೊರಕಿಸಿಕೊಡುವುದು ಅಗತ್ಯ. ಜೊತೆಗೆ, ಅವನ್ನು ಓದಿ, ಅರ್ಥೈಸಿಕೊಂಡು ತಮ್ಮ ಗ್ರಹಿಕೆಯನ್ನು ಬರಹ ರೂಪದಲ್ಲಿ ವ್ಯಕ್ತಪಡಿಸುವ ಶಿಸ್ತುಬದ್ಧ ಅಭ್ಯಾಸವನ್ನು, ಶೈಕ್ಷಣಿಕ ವಾತಾವರಣದಲ್ಲಿ ಸಂಕೋಚವಿಲ್ಲದೆ ಇಂಗ್ಲಿಷಿನಲ್ಲಿ ಸಂವಹಿಸುವ ಮುಕ್ತ ಅವಕಾಶಗಳನ್ನು ಇಂತಹ ವಿದ್ಯಾರ್ಥಿಗಳಿಗೆ ಹೆಚ್ಚುಹೆಚ್ಚಾಗಿ ಒದಗಿಸಬೇಕಾಗುತ್ತದೆ. ನಿರಂತರ ಅಭ್ಯಾಸದಿಂದ ಹೆಚ್ಚಿನ ಅವಕಾಶಗಳನ್ನು ಪಡೆದ ಇತರ ವಿದ್ಯಾರ್ಥಿಗಳಂತೆ ಅವರೂ ಸಹ ಆತ್ಮವಿಶ್ವಾಸವನ್ನು ಗಳಿಸಿ, ತಮ್ಮ ವೃತ್ತಿ ಬದುಕಿನಲ್ಲಿ ಬೆಳವಣಿಗೆಯ ಹಾದಿಯನ್ನು ರೂಪಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ.

ಏನೇ ಸವಾಲುಗಳಿದ್ದರೂ ಅವುಗಳನ್ನು ಮೀರಿ, ಈ ರೀತಿಯ ಶೈಕ್ಷಣಿಕ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ ಮತ್ತು ಅವಕಾಶಗಳು ಒಟ್ಟಿಗೇ ಒದಗಿ ಬರುವುದು ಒಮ್ಮೊಮ್ಮೆ ಮಾತ್ರ. ಇದು ಶಿಕ್ಷಣ ರಂಗಕ್ಕೆ, ಸಮಾಜಕ್ಕೆ ತನ್ನ ಕಾಲದ ಸೀಮಿತ ಪರಿಧಿಯನ್ನು ಮೀರಿ ನಿಲ್ಲುವ, ಹೊಸ ಮಾರ್ಗದಲ್ಲಿ ನಡೆಯುವ ಸವಾಲನ್ನು ಒಡ್ಡುತ್ತದೆ. ಈ ಹಿನ್ನೆಲೆಯಲ್ಲಿ, ದೇಶೀಯ ಭಾಷೆಗಳಲ್ಲಿ ಉನ್ನತ ಮಟ್ಟದ ಮೂಲ ಕೃತಿಗಳನ್ನು, ಬರಹಗಳನ್ನು ಎಲ್ಲ ಶೈಕ್ಷಣಿಕ ವಿಷಯಗಳಲ್ಲಿ ರಚಿಸುವ ಕೆಲಸವನ್ನು ವಿಶ್ವವಿದ್ಯಾಲಯಗಳು ಕೈಗೆತ್ತಿಕೊಳ್ಳಬೇಕಾದುದು ಅತ್ಯಗತ್ಯ ಎಂದು ತೋರುತ್ತದೆ. ಮೂಲ ಚಿಂತನೆಗಳನ್ನೊಳಗೊಂಡ ಪ್ರಕಟಣೆಗಳನ್ನು ಕನ್ನಡದಲ್ಲಿ ಹೊರತರುವ, ಶೈಕ್ಷಣಿಕ ವಿಚಾರಗೋಷ್ಠಿಗಳನ್ನು ಆಯೋಜಿಸಿ, ಅಲ್ಲಿ ನಡೆಯುವ ಚರ್ಚೆಗಳನ್ನು ಪ್ರಕಟಿಸುವ ಜವಾಬ್ದಾರಿಯನ್ನು ವಿಶ್ವವಿದ್ಯಾಲಯಗಳು ತೆಗೆದುಕೊಳ್ಳಬೇಕಾಗುತ್ತದೆ. ಈ ಹೊಸ ಸ್ನಾತಕೋತ್ತರ ಪದವಿ ಕಾರ್ಯಕ್ರಮದ ಭಾಗವಾಗುವ ವಿದ್ಯಾರ್ಥಿಗಳಲ್ಲಿ ಸ್ವಂತ ವಿವೇಚನಾ ಶಕ್ತಿಯೊಂದಿಗೆ ಶಿಕ್ಷಣದ ಬಗ್ಗೆ ಆಳವಾದ ತಿಳುವಳಿಕೆ, ಸಾಮಾಜಿಕಬದ್ಧತೆ ಮತ್ತು ಕ್ರಿಯಾಶೀಲ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶವಿರುವುದರಿಂದ ಇವೆಲ್ಲವನ್ನೂ ಕನ್ನಡದಲ್ಲೇ ನಡೆಸುವುದು ಇನ್ನೂ ಆಪ್ಯಾಯಮಾನವಾಗುತ್ತದೆ.

■

ವಿಜಯವಾಣಿ, 01–07–2017